ಶ್ರೀ ಪಾಪನಾಯ್ಕ.—ಈಗ ಪ್ರತಿಯೊಂದು ತಾಲೂಕಿನಲ್ಲಿಯೂ ೫೦ ಮೈಲು ಸರಾಸರಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಆದರೆ ಕೆಲವು ತಾಲೂಕುಗಳಲ್ಲಿ ೧೦–೧೫ ಮೈಲು ಮಾಡಿ ಕೆಲವು ಕಡೆ ೬೦–೭೦ ಮೈಲು ಮಾಡುವುದು ನ್ಯಾಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿ ರಸ್ತೆಗಳು ಸಂಪೂರ್ಣವಾಗಿವೆ ಅಂಥ ಕಡೆ ಸ್ವಲ್ಪ ಕಮ್ಮಿಯಾಗುತ್ತದೆ. ಮತ್ತು ಎಲ್ಲಿ ಏನೂ ಆಗಿಲ್ಲ ಅಂಥ ಕಡೆ ಸ್ವಲ್ಪ ಹೆಚ್ಚು ಮಾಡಬೇಕಾಗುತ್ತದೆ.

ಶ್ರೀ ಎಂ ಬಿ. ರಾಮಸ್ವಾಮಿ.—ಈಗ ಕೆಲವು ತಾಲೂಕುಗಳಲ್ಲಿ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದನ್ನು ಎಷ್ಟು ದಿವಸಗಳಲ್ಲಿ ಕಾರ್ಯಗತ ಮಾಡುತ್ತೀರಿ?

ಶ್ರೀ ಎಚ್ ಎಂ ಚನ್ನಬಸಪ್ಪ.—ನಾನು ಆಗಲೇ ಹೇಳಿದ್ದೇನೆ. ೧೭೦ ತಾಲೂಕುಗಳಲ್ಲಿ ೧೧೦ ತಾಲ್ಲೂಕುಗಳ ವರದಿಗಳು ಸಿದ್ಧವಾಗಿವೆ. ನಾಳೆ ನಾನು ಜಿಲ್ಲಾವಾರು ಸದಸ್ಯರುಗಳನ್ನು ಕರೆದು ಸಮಾಲೋಚನೆ ಮಾಡಬೇಕೆಂದು ಇದ್ದೆ. ಆದರೆ ನಾಳೆ ನಾನು ಹೈದರಾಬಾದಿಗೆ ಹೋಗ ಬೇಕಾಗಿರುವುದರಿಂದ, ಅದರ ನಂತರ ಅಂದರೆ ಮೂರು ದಿವಸ ಬಿಟ್ಟು ಮುಂದಿನ ದಿವಸ ಸದಸ್ಯರನ್ನು ಕರೆದು ವಿಚಾರ ಮಾಡಿ ಒಂದೊಂದು ಜಿಲ್ಲೆಯನ್ನೂ ಪೂರೈಸುತ್ತೇನೆ.

ಶ್ರೀ ಎ. ವಿ. ವೆಂಕಿಸ್ವಾಮಿ.—ರಸ್ತೆಗಳು ಯೋಗ್ಯವಾಗಿ ಒಳ್ಳೆಯದಾಗಿವೆಯೆಂದು ತೆಗೆದುಕೊಳ್ಳುತ್ತೀರೋ ಅಥವಾ ಕೆಟ್ಟವೆಯೆಂದು ತೆಗೆದುಕೊಳ್ಳುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಳ್ಳೆಯ ರಸ್ತೆಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ.

SRI D. B. KALMANKAR.—May I know whether the Government proposes to take up all the T.D.B roads once for all or in phases ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿರುವುದು ತಾಲ್ಲೂಕು ಬೋರ್ಡ್ ರಸ್ತೆಗಳು ಅಥವಾ ತಾಲ್ಲೂಕು ಬೋರ್ಡಿಗೆ ಸೇರದೇ ಇರುವ ರಸ್ತೆಗಳು ಎನ್ನುವ ಪ್ರಶ್ನೆಯಲ್ಲ. ಒಟ್ಟಿನಲ್ಲಿ ರಸ್ತೆಗಳ ಪ್ರಾಮುಖ್ಯತೆ ಹೆಚ್ಚಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—೫೦ ಮೈಲಿಗಳ ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳನ್ನಾಗಿಮಾಡಿ ತಾಲ್ಲೂಕಿಗೆ ಕೊಡುವುದು, ಹೊಸ ರಸ್ತೆಗಳನ್ನು ತಾಲ್ಲೂಕಿಗೇ ಕೊಡತಕ್ಕ ವಿಷಯ ಬೇರೆ ಬೇರೆಯಾಗಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆರಡೂ ಬೇರೆಬೇರೆ ಸಮಸ್ಯೆಗಳಾಗಿವೆ. ಹಳ್ಳಿಗಳಲ್ಲಿ ರಸ್ತೆಗಳನ್ನು ಹೊಸದಾಗಿ ಮಾಡುವುದು ಮತ್ತು ಕೆಟ್ಟು ಹೋಗಿರತಕ್ಕ ರಸ್ತೆಗಳನ್ನು ದುರಸ್ತು ಮಾಡುವುದು. ಈಗ ಹಳ್ಳಿಗಳ ರಸ್ತೆಗಳನ್ನು ತಾಲ್ಲೂಕಂಬೋರ್ಡ್ ರಸ್ತೆಗಳನ್ನಾಗಿ ಮಾಡಿ ಪ್ರಾಮುಖ್ಯವಾದಂಥ ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆಗಳಾಗಿ ಅಪ್‌ಗ್ರೇಡ್ ಮಾಡುವುದು ಇರತಕ್ಕ ವಿಷಯ.

SALE OF LAND TO COFFEE GROWERS IN THE STATE

451. SRI G. PUTTASWAMY (Mudigere).—

Will the Minister for Revenue be pleased to state :—

(*a*) whether it has come to the notice of the Government that the Coffee Growers are experiencing difficulties in getting loans, etc., from the Indian Coffee Board, Banks and other Organisations, as the land for Coffee cultivaion is sanctioned on lease basis with lease chits ;

(*b*) if so, the steps taken to sanction the land as an out-right grant by recovering the land value with permanent Saguvali Chits ;

(*c*) whether there is any proposal before Government to amend the Land Grant Rules in order to prevent the discretionary powers of the authorities granting the land in regard to levy of (upset price) land value, specifying one standard value ?

SRI N. HUTCHAMASTHY GOWDA (Minister for Revenue).—

(a) No.

(b) Does not arise.

(c) No. One standard rate cannot be fixed as the market value of the land depends upon its fertility which varies from place to place.

ಶ್ರೀ ಜಿ. ಪುಟ್ಟಸ್ವಾಮಿ.— (ಸಿ) ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಡಿಸ್ಕ್ರಿಮಿನೇಷ್ ಮಾಡಿದಂತಿದೆ. ಇದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತಿದೆ. ಅವರು ಇನ್ನೂ ನಷ್ಟಕ್ಕೊಳಗಾಗಲಿ ಎಂಬುದಾಗಿ ಇದನ್ನು ತಿದ್ದುಪಡಿಮಾಡುವುದಿಲ್ಲವೆಂದು ತಮ್ಮ ಅಭಿಪ್ರಾಯವೇ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಿಂದ ತಾರತಮ್ಯವಾಗುವುದಿಲ್ಲ. ಏಕೆಂದರೆ ಆ ಜಮೀನಿನ ಬೆಲೆ ಅಲ್ಲಿನ ಮಾರ್ಕೆಟ್ ಬೆಲೆಯ ಪ್ರಕಾರ ಒಂದು ಹೆಕ್ಟಾರ್‌ಗೆ ೧೨೫೦ ರೂಪಾಯಿಗಳೆಂದು ಹಾಕಲಾಗಿದೆ; ಆದ್ದರಿಂದ ಈಗಿರತಕ್ಕ ಬೆಲೆಯಿಂದಿದಕ್ಕಿಂತ ಕಡಿಮೆಯಾಗಿದ್ದರೆ, ಡೆಪ್ಯುಟಿ ಕಮಿಷನರ್ ಅವರು ಅಲ್ಲಿನ ಮಾರ್ಕೆಟ್ ಬೆಲೆಯನ್ನು ಸುತ್ತಮುತ್ತ ತಿಳಿದು ಅದರಂತೆ ಕೊಡಬೇಕೆಂದು ಇರುವುದರಿಂದ ಅದರಲ್ಲಿ ಏನೂ ತಾರತಮ್ಯ ವಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಡೆಪ್ಯುಟಿ ಕಮಿಷನರ್ ಈಗ ಒಂದು ಎಕರೆಗೆ ೮೦೦ ರೂಪಾಯಿಗಳೆಂದು ಆವ್‌ಸೆಜ್ ಪ್ರೈಸ್ ವಸೂಲುಮಾಡಿದ್ದಾರೆಂಬುದು ತಮಗೆ ಗೊತ್ತಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—೧೨೫೦ ರೂಪಾಯಿಗಳು ಒಂದು ಹೆಕ್ಟಾರಿಗೆ. ಅದು ೬೦೦ ರೂಪಾಯಿ ಚಿಲ್ಲರೆಯಾಗುತ್ತದೆ. ೮೦೦ ರೂಪಾಯಿಗಳು ಆಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಇದನ್ನು ವಿಚಾರಣೆಮಾಡಿ ಡೆಪುಟ್ಯಿ ಕಮಿಷನರಿಂದ ಒಂದು ಸರ್ಕ್ಯುಲರನ್ನು ಹೊರಡಿಸಿ, ಏಕೆಂದರೆ ೮೦೦ ರೂಪಾಯಿಗಳಂತೆ ಅನೇಕರಿಂದ ವಸೂಲು ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೆಂದು ನಾನು ಹೇಳುತ್ತೇನೆ. ತಮಗೆ ಸಂಘ ಸಂಸ್ಥೆಗಳಿಂದ ಪರ್ಸನಲ್ಲಾಗಿ ವರದಿಯನ್ನು ಕೊಟ್ಟಿದ್ದಾರೆಯೇ, ರೆಪ್ರಸಂಟೇಷನ್ ಕೊಟ್ಟಿದ್ದರೆ ಇಲ್ಲವೆಂದು ಹೇಳುತ್ತೀರಿ. ತಮಗೆ ಈಗಾಗಲೇ ಬಂದಿರುವ ವರದಿಯ ಪ್ರಕಾರ ಅದನ್ನು ಸರಿಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—೧೨೫೦ ರೂಪಾಯಿಗಳು ಕನಿಷ್ಠ ಬೆಲೆ, ಅದಕ್ಕಿಂತ ಹೆಚ್ಚು ಜಲೆ ಅಂಡರೆ ಮಾರ್ಕೆಟ್ ರೇಟ್ ಹೆಚ್ಚು ಇರುವ ಕಡೆಗಳಲ್ಲಿ ೮೦೦ ರೂಪಾಯಿಗಳ ಮೇಲೆ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕಿಂತ ಕಡಿಮೆಮಾಡುವ ಅಗತ್ಯ ಸರ್ಕಾರಕ್ಕೆ ಇನ್ನೂ ಕಂಡುಬಂದಿಲ್ಲ. ಕೆಲವು ಕಡೆಗಳಲ್ಲಿ ಕಡಿಮೆ ಕೊಡುವ ಅಭಿಪ್ರಾಯವೂ ಇದೆ. ಎಲ್ಲಿ ೫ ಎಕರೆಗಳಿಗಿಂತ ಕಡಿಮೆಯಾಗಿ ಕಾಫಿ ಬೆಳೆಯಾಗುತ್ತದೋ ಅಂತಹ ಕಡೆಗಳಲ್ಲಿ ಅರ್ಧ ಬೆಲೆಗೆ ಕೊಡುವುದು ಜಾರಿಯಲ್ಲಿದೆ. ಮತ್ತೆ ಇದನ್ನು ರಿವೈಜ್ ಮಾಡುವ ಅಗತ್ಯತೆ ಕಂಡುಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಫಿ ಮಂಡಲಿ ಮತ್ತು ಬ್ಯಾಂಕುಗಳಲ್ಲಿ ಸಾಲವನ್ನು ೨೫ ಎಕರೆ ಗಳಿಗಿಂತ ಜಾಸ್ತಿ ಇದ್ದರೆ ೧೫೦೦ ಜನರಿಗೆ ಬೇಕಾದರೂ ಹೆಚ್ಚಿನ ಸೌಲಭ್ಯವನ್ನು ಕೊಡುತ್ತೀರಿ. ಆದರೆ ೨೫ ಎಕರೆಗಳಿಗಿಂತ ಕಡಿಮೆ ಇರತಕ್ಕ ಲಕ್ಷ ಸಾವಿರ ಜನ ಹಿಡುವಳಿದಾರರಿಗೆ ಯಾವ ತರಹ ಸವಲತ್ತು ಕೊಡುತ್ತಾ ಇಲ್ಲ. ಅದನ್ನು ಸರಿಪಡಿಸಿ ೧೫೦೦ ಜನರಿಗೆ ಕಾಫಿ ಮಂಡಲಿ ಹಾಗೂ ಬ್ಯಾಂಕುಗಳಿಂದ ಸಾಲ ಸಿಗುವಂತೆ ಇವರಿಗೂ ಸಹ ಕೊಡಲು ತಕ್ಕ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ಮಂಡಲಿಯಿಂದ ಸಾಲ ಸಿಗುತ್ತಾ ಇರುವುದು ಈ ಪ್ರಶ್ನೆಯಲ್ಲಿ ನೇರವಾಗಿ ಉದ್ಭವಿಸುವುದಿಲ್ಲ. ಆದರೂ ಕೂಡ ಕಾಫಿ ಭೂಮಿಯನ್ನು ವ್ಯವಸಾಯಕ್ಕೆ ತೆಗೆದು ಕೊಂಡಿರುವವರಿಗೆ ಕಾಫಿ ಮಂಡಲಿಯಲ್ಲಿ ಸಾಲ ಸಿಗುತ್ತಾ ಇದ್ದರೂ ಕೂಡ ಅಭಿವೃದ್ಧಿಯ ಸಾಲವೆಂದು ಬ್ಯಾಂಕುಗಳಿಂದಲೂ ಹಾಗೂ ಸರ್ಕಾರದಿಂದಲೂ ಸಾಲ ಸಿಗುತ್ತದೆ. ಆದರೆ ಕಾಫಿ ಮಂಡಲಿಯ ಜೊತೆಯಲ್ಲಿ ಸಣ್ಣಸಣ್ಣ ಹಿಡುವಳಿದಾರರಿಗೆ ಏನೇನು ತೊಂದರೆ ಇದೆಯೆಂದು ವ್ಯವಹಾರ ಮಾಡುವುದಕ್ಕೆ ಅಡ್ಡಿ ಇಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಈಗ ಕಾಫಿ ಬೆಳೆ ಬೆಳೆಯುತಕ್ಕ ಜನರಿಗೆ ಕಾಫಿ ಬೋರ್ಡಿನವರು ಲ್ಯಾಂಡ್ ಸರ್ಟಿಫಿಕೇಟ್ ಕೊಡಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಕಾಫಿ ಎಸ್ಟೇಟ್ಸ್ ಇರುವುದು ತಮ್ಮ ಗಮನದಲ್ಲಿ ಇರಬಹುದು. ಹಾಗಿರುವಾಗ ಜಿಲ್ಲಾಧಿಕಾರಿಗಳಿಗೆ ಹೆಚ್ಚು ಕಡಿಮೆ ಈ ಅಧಿಕಾರವನ್ನು ಕೊಟ್ಟಿದ್ದರಿಂದ ಇನ್‌ಜಸ್ಟೀಸ್ ಆಗುತ್ತದೆಂಬುದು ತಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಕಾಫಿ ರಿಜಿಸ್ಟ್ರೇಷನ್ ಆಕ್ಟ್ ಎಂದು ಒಂದು ಸೆಂಟ್ರಲ್ ಆಕ್ಟ್ ಇದೆ. ಆ ಪ್ರಕಾರವಾಗಿ ಡೆಪ್ಯುಟಿ ಕಮಿಷನರುಗಳು ಕಾಫಿ ಬೆಳೆಯುವುದಕ್ಕೆ ಜಮೀನು ಲಾಯಕ್ಕಾಗಿದೆಯೇ ಎಂದು ನೋಡುತ್ತಾರೆ. ಮೂರು ವರ್ಷಗಳ ಅವಧಿಯೊಳಗೆ ಕಾಫಿ ಬೆಳೆಗೆ ಹೊಸದಾಗಿ ಭೂಮಿ ಕೊಡಬೇಕೆಂದೂ, ಆ ಬೆಳೆ ಇಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ಡೆಪ್ಯುಟಿ ಕಮಿಷನರ್ ನೋಡಿ ಸರ್ಟಿಫಿಕೇಟ್ ಕೊಟ್ಟಮೇಲೆ ಅವನಿಗೆ ಭೂಮಿಯನ್ನು ಕನ್‌ಫರ್ಮ್ ಮಾಡಬೇಕಾಗುತ್ತದೆ. ಈಗ ಕೊಡುವ ರೀತಿಯಲ್ಲಿ ಅವನಿಗೆ ಲೀಜ್ ರೂಪದಲ್ಲಿ ಕೊಟ್ಟಿದೆ. ಮೂರು ವರ್ಷಗಳೊಳಗೆ ಈ ಬೆಳೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಡೆಪ್ಯುಟಿ ಕಮಿಷನರ್ ವಿಶೇಷ ಕಾರಣಗಳಿಂದ ಐದು ವರ್ಷಗಳವರೆಗೆ ಜಾಸ್ತಿ ವಾಯಿದೆಯನ್ನು ಹೆಚ್ಚಿಸಿ ಇಷ್ಟೇ ಎಂದು ನಿಗದಿಮಾಡುತ್ತಾರೆ. ಅದು ಗೊತ್ತಾದಮೇಲೆ ಅದನ್ನು ಕನ್‌ಫರ್ಮ್ ಮಾಡುವುದು ಆಗುತ್ತದೆ. ಉಳಿದ ಸೌಕರ್ಯಗಳನ್ನು ಸರ್ಕಾರದಿಂದ ಒದಗಿಸಲಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಮೂರು ವರ್ಷಗಳೊಳಗೆ ಡೆಪ್ಯುಟಿ ಕಮಿಷನರ್ ಸಾಗುವಳಿ ಚೀಟಿಯನ್ನು ಕೊಡದೇ ಇದ್ದರೆ ಲೀಜ್ ಬೇಸಿಸ್ ಮೇಲೆ ಕೊಟ್ಟಿರುತ್ತಾರೆ. ಒಂದು ಎಕರೆ ಒಂದು ಸಾವಿರ ರೂಪಾಯಿ ಗಳಷ್ಟು ದುಡ್ಡು ಬೇಕಾಗುತ್ತದೆ. ಆದ್ದರಿಂದ ಸಾಲ ಪಡೆಯುವುದಕ್ಕೆ ಬ್ಯಾಂಕುಗಳಲ್ಲಿ ಸಾಧ್ಯವಿಲ್ಲ. ಆದ್ದರಿಂದ ಒಂದೇ ಸಾರಿ ಕಾಫಿ ಬೆಳೆಗಾರರಿಂದ ಹಣ ತೆಗೆದುಕೊಂಡು ಖಾಯಂ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರೀತಿ ಕಾಫಿ ಬೆಳೆಯುವ ಭೂಮಿಯನ್ನು ಪಡೆಯಲು ನೇರವಾಗಿ ಟೈಟ್‌ರೇಟ್ ಗ್ರಾಂಟ್ ಕೊಟ್ಟು ಅದು ದುರುಪಯೋಗವಾಗಿರುವುದರಿಂದಲೇ, ಸರ್ಕಾರ ಅದನ್ನು ಈಗ ಲೀಜ್ ರೂಪವಾಗಿ ಕೊಟ್ಟಿರುವುದು. ಆ ರೀತಿಯಾಗಿ ಸರ್ಕಾರ ಲೀಜ್ ಕೊಟ್ಟಿರುವ ಕಾಲದಿಂದ ಅಭಿವೃದ್ಧಿ ಬ್ಯಾಂಕಿನಿಂದ ಆಥವಾ ಸರ್ಕಾರದಿಂದ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಇದನ್ನು ಮೊಟ್ಟಮೊದಲು ಟೈಟ್‌ರೇಟ್ ಗ್ರಾಂಟಿನಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಈ ಕ್ರಮವನ್ನು ಕೈಗೊಂಡಿದೆ.

LOAN TAKEN BY CITY MUNICIPAL COUNCIL, GULBARGA.

457. SRI MALLIKARJUNA (Gurmitkal).—

Will the Minister for Municipal Administration be pleased to state .—

The total amount of loan taken by the City Municipal Council, Gulbarga from Government during the last three years *i.e.*, from 1969 to 1971 ?

SRI B. BASAVALINGAPPA.—Minister for Municipal Administration.

Nil.

SRI MALLIKARJUNA.—Whether the Government has received any information that the Municipality has received a loan of Rs. one crore from LIC and its misutilisation by the President ?

‡SRI BASAVALINGAPPA —No Sir. Government has stood guarantee for the loan taken by the Municipality from the LIC.

SRI MALLIKARJUNA.—Have you received any complaints regarding the misappropriation of the Municipalitys funds ?

SRI B. BASAVALINGAPPA.—There are several representations which are now being received by the Government and we have not actually known what is the misappropriation.